MR. SPEAKER : We are bound by the decision of the Business Advosory Committee. It cannot be revised now.

SRI K. BHASKAR NAIDU : It is only my request to reconsider the decision of the Business Advisory Committee.

ಅಧ್ಯಕ್ಷರು ; ಸರ್ಕಾರ ಒಪ್ಪಿಕೊಳ್ಳುವುದಾದರೆ ನನ್ನದೇನು ಭಿನ್ನಾಭಿಪ್ರಾಯವಿಲ್ಲ.

SRI D. DEVARAJ URS (Chief Minister).—If the Hon'ble Speaker were to call the meeting of the B.A.C., we will discuss the question with the hon. the Leader of the Opposition.

CALLING ATTENTION TO THE MATTERS OF URGENT PUBLIC IMPORTANCE

(*i*) *re : nontaking up of the Gadag- Betegeri Water Supply Scheme*

SRI C.S. MUTHINAPENDIMATH.—Sir, I call the attention of the Minister for Municipal Administration to the serious problem created on account of non-taking up of Gadag-Betegeri Water Supply Scheme.

SRI H.C. SRIKANTAIAH (Minister for Mnnicipal Administration)—I request the Chair to hold-over this because I could not get the detailed information on this subject.

(*ii*) *re: non-repair of X-ray equipment in Hassan District Hospital*

SRI K.H. HANUME GOWDA, (Hassan).—Sir, I call the attention of the Minister for Health and Family Welfare to the non-repair of X.Ray equipment in Hassan District Hospital.

SRI M. MALLAPPA (Minister for Health and Family Welfare)—I wish to make the following statement :—

The Departmental X-Ray Engineer has visited the District Hospital, Hassan on 28-1-1979. The 200 M.A. Siemen's X-Ray Unit which was out of order has been repaired.

At present the X-Ray Machine is in working orders.

ಶ್ರೀ ಕೆ.ಎಚ್. ಹನುಮೇಗೌಡ—ಸ್ವಾಮಿ ಎಕ್ಸ್‌ರೆ ಯೂನಿಟ್ ವರ್ಷದಲ್ಲಿ ೧೧ ತಿಂಗಳು ಕೆಟ್ಟು ನಿಂತಂಹೋಗುತ್ತದೆ. ಅವುಗಳು ಸರಿಯಾಗಿ ಕೆಲಸ ಮಾಡದಿದ್ದ ಮೇಲೆ ಅವುಗಳು ಇದ್ದೂ ಪ್ರಯೋಜವಿಲ್ಲ. ಇಂಜನೀಯರ್‌ರವರು ಇದ್ದರೂ ಕೂಡ ಅವುಗಳು ರಿಪೇರಿಯಾಗದಿದ್ದರೆ ಏನು ಪ್ರಯೋಜವೆಂದು ಹೇಳಂತ್ತೇನೆ.

ಶ್ರೀ ಎಂ. ಮಲ್ಲಪ್ಪ—ಎಕ್ಸ್‌ರೆ ಯೂನಿಟ್‌ಗಳನ್ನು ರಿಪೇರಿ ಮಾಡತಕ್ಕಂಥ ಇಂಜಿನಿಯರ್‌ಗಳು ಏನು ಇರುತ್ತಾರೆ. ಅವರಿಗೆ ಒಂದು ರೆಗ್ಯುಲರ್ ಪ್ರೋಗ್ರಾಮ್ ಇರುತ್ತದೆ. ಎಲ್ಲೆಲ್ಲಿ ಕೆಟ್ಟಿರುತ್ತದೆ ಅಲ್ಲಿಗೆ ಹೋಗಿ ರಿಪೇರಿ ಮಾಡಿ ಮುಗಿಸಿಕೊಂಡು ಬರುವುದರಿಂದ ಸ್ವಲ್ಪ ನಿಧಾನವಾಗಬಹುದು.

ಶ್ರೀ ಕೆ.ಎಚ್. ಹನುಮೇಗೌಡ—ಎಕ್ಸ್‌ರೆ ಯೂನಿಟ್‌ಗಳು ಮುಖ್ಯವಾಗಿ ಡಿಸ್ಟ್ರಿಕ್ಟ್ ಆಸ್ಪತ್ರೆಗಳಲ್ಲಿ ಇರುತ್ತವೆ. ಅಲ್ಲಿ ಅವು ಆರು ತಿಂಗಳು ಎಂಟು ತಿಂಗಳು ಕೆಟ್ಟು ನಿಂತಿರುತ್ತವೆ. ನಿಮ್ಮ ಇಂಜಿನಿಯರ್‌ಗಳು ಪ್ರೋಗ್ರಾಮ್ ಪ್ರಕಾರ ಮುಗಿಸಿಕೊಂಡು ಬರುವತನಕ ಸಾಯುತ್ತಿರುವ ಮನುಷ್ಯನನ್ನು ಪೋಸ್ಟ್

ಫೋನ್ ಮಾಡುವುದಕ್ಕೆ ಸಾಧ್ಯವೆ ? ದಯವಿಟ್ಟು ಪೂರ್ಣವಾಗಿ ಕೆಲಸಮಾಡದೆ ಇರತಕ್ಕಂಥ ಎಕ್ಸ್‌ರೆ ಮಿಷನ್‌ಗಳನ್ನು ತೆಗೆದು, ಬೇರೆ ಮಿಷನ್‌ಗಳನ್ನು ಹಾಕಬೇಕೆಂದು ಹೇಳುತ್ತೇನೆ.

ಶ್ರೀ ಎಂ. ಮಲ್ಲಪ್ಪ—ಜನವರಿ ಮೂರನೆ ವಾರದಿಂದ ಎಕ್ಸ್‌ರೆ ಮಿಷನ್ ಕೆಲಸ ಮಾಡುತ್ತಿದೆ. ಒಂದು ಪಕ್ಷ ಕೆಟ್ಟು ಜೆನ್ನಾಗಿ ಕೆಲಸ ಮಾಡುತ್ತಿಲ್ಲ ಎನ್ನುವುದು ಕಂಡುಬಂದರೆ ಪರಿಶೀಲನೆ ಮಾಡಿ ರಿಪೇರಿ ಕೆಲಸವನ್ನು ಜಾಗ್ರತೆಯಾಗಿ ತೆಗೆದುಕೊಳ್ಳುತ್ತೇವೆ. ಸದ್ಯದಲ್ಲಿ ಯಾವ ತೊಂದರೆಯೂ ಇಲ್ಲವೆಂದು ತಿಳಿದಿರುತ್ತದೆ. ಮುಂದೆ ತೊಂದರೆ ಬಂದಾಗ ನೋಡೋಣ.

MATTER UNDER RULE 312

(i) re : acute shortage of water in villages in Madhugiri, Koratagere, Gubbi and Tumkur Taluks.

†ಶ್ರೀ ಜಿ.ಎಸ್. ಶಿವನಂಜಪ್ಪ (ಬೆಳ್ಳಾವಿ)—ಮಾನ್ಯ ಅಧ್ಯಕ್ಷರೆ ನಾನು ತುಮಕೂರು ಜಿಲ್ಲೆಯ ಮಧುಗಿರಿ, ಕೊರಟಗೆರೆ, ಗುಬ್ಬಿ, ತುಮಕೂರು ತಾಲ್ಲೂಕುಗಳಲ್ಲಿ ಕುಡಿಯುವ ನೀರಿಗೆ ಪಡುತ್ತಿರುವ ಬವಣೆಯ ಬಗ್ಗೆ ಗಮನ ಸೆಳೆಯುವ ಸೂಚನೆಯ ಮುಖಾಂತರ ನಿರ್ದಿಷ್ಟವಾಗಿ ಬರೆದು ಕಳುಹಿಸಿದ್ದೆ. ನಾನು ಬರೆದು ಕಳುಹಿಸಿರತಕ್ಕಂಥ ಹಳ್ಳಿಗಳಲ್ಲಿ ಸುಮಾರು ಒಂದು ವರ್ಷದಿಂದ ಸರ್ಕಾರವನ್ನು ಕೇಳುತ್ತಲೇ ಇದ್ದೇನೆ. ಹಳ್ಳಿಗಳಲ್ಲಿ ಕುಡಿಯುವ ನೀರಿಗೆ ಬಹಳ ತೊಂದರೆಯಾಗಿದೆ. ಕೊರಹಳ್ಳಿಗೆ ಸೇರಿದಂಥ ೫೩ ಹಳ್ಳಿಗಳಿಗೆ ಕುಡಿಯುವ ನೀರಿನ ವ್ಯವಸ್ಥೆ ಇಲ್ಲ. ಚನ್ನರಾಯನದುರ್ಗಕ್ಕೆ ಸೇರಿದಂತೆ ೧೪ ಹಳ್ಳಿಗಳಿಗೆ ಕುಡಿಯುವ ನೀರಿನ ವ್ಯವಸ್ಥೆ ಇರುವುದಿಲ್ಲ. ದೊಡ್ಡೇರಿ ಹಳ್ಳಿಗೆ ಸೇರಿದಂತೆ ೧೮ ಹಳ್ಳಿಗಳಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಇಲ್ಲದೆ ತೊಂದರೆ ಪಡುತ್ತಿರುತ್ತಾರೆ. ಅದರಲ್ಲೂ ಹರಿಜನರು ವಾಸಮಾಡತಕ್ಕಂಥ ಸ್ಥಳಗಳಲ್ಲಿ, ಹಿಂದುಳಿದವರು ಇರತಕ್ಕಂಥ ಸ್ಥಳಗಳಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಸರಿಯಾಗಿಲ್ಲದೆ ಜನರು ಬಹಳವಾಗಿ ತೊಂದರೆಯನ್ನು ಅನುಭವಿಸುತ್ತಿರುವ ವಿಷಯವನ್ನು ಸುಮಾರು ಒಂದು ವರ್ಷದಿಂದ ಸಂಬಂಧಪಟ್ಟ ಚೀಫ್ ಇಂಜಿನಿಯರ್‌ರವರಿಗೂ ಮತ್ತು ಸಂಬಂಧಪಟ್ಟ ಬಿ.ಡಿ.ಓ.ರವರಿಗೂ ಏನಿಲ್ಲವೆಂದರೂ ೫೦ ಬಾರಿಯಾದರೂ ಕೇಳಿಕೊಂಡಿರುತ್ತೇವೆ. ಅವರು ಈವತ್ತಿನವರೆಗೂ ಯಾವುದೇ ಕ್ರಮವನ್ನು ತೆಗೆದುಕೊಂಡಿಲ್ಲ. ಆದ್ದರಿಂದ ಈವತ್ತಿನ ದಿವಸ ಪ್ರಶ್ನೆಯನ್ನು ಈ ಸದನದಲ್ಲಿ ಕೇಳುತ್ತಿರುತ್ತೇನೆ. ಸಂಬಂಧಪಟ್ಟ ಮಂತ್ರಿಗಳು ಹಾಜರಿಲ್ಲವೆಂದು ಕಾಣುತ್ತದೆ. ಉತ್ತರವನ್ನು ಯಾರು ಕೊಡುತ್ತಾರೋ ನನಗಂತೂ ತಿಳಿಯುತ್ತಿಲ್ಲ. ಸ್ವಾತಂತ್ರ್ಯ ಬಂದು ೩೦ ವರ್ಷಗಳಾದರೂ ಹರಿಜನರಿಗೆ ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡಿಲ್ಲವೆಂದರೆ ಇದು ಒಂದು ವಿಷಾದ ಪಡತಕ್ಕಂಥ ಸಂಗತಿಯಾಗಿರುತ್ತದೆ, ಪಂಪ್ ಸೆಟ್‌ಗಳನ್ನು ಇಟ್ಟುಕೊಂಡಿರತಕ್ಕಂಥವರು ನೀರನ್ನು ಕೊಡುವುದಿಲ್ಲ. ಜನರು ಕುಡಿಯುವ ನೀರಿಗಾಗಿ ಆಹಾಕಾರಪಡುತ್ತಿದ್ದಾರೆ. ಆದ್ದರಿಂದ ಕುಡಿಯುವ ನೀರಿನ ವ್ಯವಸ್ಥೆಯನ್ನು ಆದಷ್ಟು ಜಾಗ್ರತೆ ಮಾಡಿ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ನಾನು ಅನೇಕ ಪತ್ರಗಳನ್ನೂ ಬರೆದಿದ್ದೇನೆ ಮತ್ತು ಅಧಿಕಾರಿಗಳಿಗೂ ತಿಳಿಸಿದ್ದೇನೆ. ನಾನು ಪತ್ರ ಬರೆದರೆ ಉತ್ತರ ಕೊಡತಕ್ಕ ಸೌಜನ್ಯವೂ ಸರ್ಕಾರಕ್ಕಿಲ್ಲ. ಅಲ್ಲಿ ಜನ ಗಂಂಪು ಕಟ್ಟಿಕೊಂಡು ನಮ್ಮ ಹತ್ತಿರ ಗಲಾಟೆ ಮಾಡುವುದಕ್ಕೆ ಬರುತ್ತಿದ್ದಾರೆ. ಈ ಸ್ಥಿತಿಯಲ್ಲಿ ನಾವೇನು ಮಾಡಬೇಕು ? ಸ್ವಾಮಿ, ನನ್ನ ಪ್ರಶ್ನೆಗಳಿಗೆ ಯಾರು ಉತ್ತರ ಕೊಡುತ್ತಾರೋ ಗೊತ್ತಿಲ್ಲ, ಸಂಬಂಧಪಟ್ಟ ಮಂತ್ರಿಗಳು ಸದನದಲ್ಲಿಲ್ಲ.

೧೦-೦೦ ಎ.ಎಂ.

ಅಧ್ಯಕ್ಷರು—ಯಾರು ಉತ್ತರ ಕೊಡುತ್ತಾರೋ ನನಗೂ ಗೊತ್ತಾಗುತ್ತಿಲ್ಲ, ಇವರು ಏತಕ್ಕೆ ಹೀಗೆ ಮಾಡುತ್ತಾರೋ ನನಗೆ ಒಂದೂ ಅರ್ಥವಾಗಂತ್ತಿಲ್ಲ.

ಶ್ರೀ ಜಿ.ಎಸ್. ಶಿವನಂಜಪ್ಪ.—ಭಗವಂತನೇ ಬರಬೇಕು.

ಅಧ್ಯಕ್ಷರು.— ಇದಕ್ಕಿಂತ ಹೆಚ್ಚಿನ ಕೆಲಸ ಮಾನ್ಯ ಮಂತ್ರಿಗಳಿಗೆ ಏನು ಇರುತ್ತದೋ ಗೊತ್ತಾಗುವುದಿಲ್ಲ.